ಬೆಂಗಳೂರು ನಗರದಲ್ಲಿ ಬಾಲಕಾರ್ಮಿಕರ ಶೋಷಣೆ ತಡೆಯುವುದು

901 (969) ಶ್ರೀ. ನರೇಂದ್ರ ಬಾಬು ನೆ.ಲ. (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಬಾಲ ಕಾರ್ಮಿಕರ ಸಂಖ್ಯೆ ಎಷ್ಟು; ಯಾವ ಯಾವ ಜಾಗದಲ್ಲಿ ಬಾಲ ಕಾರ್ಮಿಕರನ್ನು ಕೆಲಸಕ್ಕೆ ತೊಡಗಿಸಿರುತ್ತಾರೆ;

ಆ) ಹಾಗಿದ್ದಲ್ಲಿ, ಸರ್ಕಾರ ಇದನ್ನು ತಡೆಯಲು ಕೈಗೊಂಡ ಕ್ರಮಗಳೇನು;

ಇ) ಬಾಲ ಕಾರ್ಮಿಕರನ್ನು ನೇಮಿಸಿಕೊಂಡಿರುವ ಸಂಸ್ಥೆಗಳಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; ಆ ಸಂಸ್ಥೆಗಳಿಗೆ ಏನಾದರೂ ದಂಡ ವಿಧಿಸುತ್ತದೆಯೇ (ವಿವರ ನೀಡುವುದು);

ಈ) ಬಾಲ ಕಾರ್ಮಿಕರ ಪುನರ್ವಸತಿಗೆ ಸರ್ಕಾರ ತೆಗೆದು ಕೊಂಡಿರುವ ಕ್ರಮ ಮತ್ತು ಕೇಂದ್ರಗಳೇನಾದರೂ ಇದೆಯೇ;

ಉ) ಹಾಗಿದ್ದಲ್ಲಿ, ಅವುಗಳ ಸಂಖ್ಯೆ ಮತ್ತು ಎಲ್ಲೆಲ್ಲಿ ಇವೆ(ವಿವರ ನೀಡುವುದು)?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) :

ಅ) ಬಾಲ ಕಾರ್ಮಿಕ ಸಮೀಕ್ಷೆ ಕಾರ್ಯವನ್ನು ರಾಜ್ಯ ಸರ್ಕಾರವಾಗಲೀ, ಕೇಂದ್ರ ಸರ್ಕಾರವಾಗಲೀ ಕೈಗೊಳ್ಳದೇ ಇರುವುದರಿಂದ, ಬೆಂಗಳೂರು ನಗರದಲ್ಲಿರುವ ಬಾಲ ಕಾರ್ಮಿಕರ ಸಂಖ್ಯೆ ಲಭ್ಯವಿರುವುದಿಲ್ಲ.

ಸಮೀಕ್ಷೆ ನಡೆಸದೇ ಇರುವುದರಿಂದ ಬೆಂಗಳೂರು ನಗರದ ಯಾವ ಯಾವ ಭಾಗದಲ್ಲಿ ಇರುವ ಬಾಲ ಕಾರ್ಮಿಕರ ಮಾಹಿತಿಯು ಸಹ ಲಭ್ಯವಿರುವುದಿಲ್ಲ.

ಆ) ಬಾಲ ಕಾರ್ಮಿಕ ಪಿಡುಗನ್ನು ತಡೆಗಟ್ಟಲು ಹಾಗೂ ಕರ್ನಾಟಕ ರಾಜ್ಯವನ್ನು ಬಾಲ ಕಾರ್ಮಿಕ ಮುಕ್ತ ರಾಜ್ಯವನ್ನಾಗಿ ಘೋಷಿಸಲು 2001ನೇ ಸಾಲಿನಲ್ಲಿ ಕ್ರೀಯಾ ಯೋಜನೆ ರೂಪಿಸಿದ್ದು, ಆ ಕ್ರಿಯಾ ಯೋಜನೆಯಂತೆ ಬಾಲ ಕಾರ್ಮಿಕತೆಯನ್ನು ಸಮಗ್ರವಾಗಿ ಹೋಗಲಾಡಿಸಲು ಕ್ರಮ ಕೈಗೊಳ್ಳಲಾ ಗುತ್ತಿದೆ. ರಾಜ್ಯಾದ್ಯಂತ ಬಾಲ ಕಾರ್ಮಿಕರ ಸಮೀಕ್ಷೆ ಕೈಗೊಳ್ಳಲು ರೂಪುರೇಷೆ ಗಳನ್ನು ತಯಾರಿಸಲಾಗುತ್ತಿದ್ದು, ಸಮೀಕ್ಷಾ ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಇ) ಬಾಲ ಕಾರ್ಮಿಕ (ನಿಷೇಧ ಹಾಗೂ ನಿಯಂತ್ರಣ) ಕಾಯ್ದೆ 1986ರ ಕಲಂ 3 ಹಾಗೂ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ. 1961 ರ ನಿಯಮ 24ರ ರೀತ್ಯಾ ಬಾಲ ಕಾರ್ಮಿಕರನನ್ನು ಅಪಾಯಕಾರಿ ಮತ್ತು ಅಪಾಯಕಾರಿಯಲ್ಲದ ಉದ್ದಿಮೆಗಳಲ್ಲಿ ನೇಮಿಸಿಕೊಳ್ಳುವುದನ್ನು ನಿಷೇಧಿಸಲಾಗಿದೆ.

ಕಳೆದ 5 ವರ್ಷಗಳಲ್ಲಿ ಬಾಲ ಕಾರ್ಮಿಕರನ್ನು ನೇಮಿಸಿಕೊಂಡ ತಪ್ಪಿತಸ್ಥ ಮಾಲೀಕರ ವಿರುದ್ಧ 7930 ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲಾಗಿದೆ. 496 ಪ್ರಕರಣಗಳು ಶಿಕ್ಷೆಯಲ್ಲಿ ಕೊನೆಗೊಂಡಿದ್ದು, ರೂ.5,18,176/– ದಂಡ ವಿಧಿಸಲಾಗಿದೆ ಮತ್ತು 2 ಪ್ರಕರಣದಲ್ಲಿ ಜೈಲು ಶಿಕ್ಷೆಯನ್ನು ಸಹ ವಿಧಿಸಲಾಗಿದೆ.

ಈ) ಕೆಲಸದಿಂದ ಬಿಡುಗಡೆಗೊಳಿಸಿದ ಬಾಲ ಕಾರ್ಮಿಕರಿಗೆ ಪುನರ್ವಸತಿ ಒದಗಿಸುವ ಸಲುವಾಗಿ ರಾಜ್ಯ ಸರ್ಕಾರ ಬಾಲ ಕಾರ್ಮಿಕರ ನಿರ್ಮೂಲನ ಕ್ರಿಯಾ ಯೋಜನೆಯನ್ನು 2001 ರಿಂದ ಅನುಷ್ಠಾನಕ್ಕೆ ತಂದಿರುತ್ತದೆ. ಈ ಯೋಜನೆಯಡಿ ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆಗೆ ಒಳಪಡುವ ಜಿಲ್ಲೆಗಳನ್ನು ಹೊರತುಪಡಿಸಿ, ಇತರೆ 15 ಜಿಲ್ಲೆಗಳಲ್ಲಿ ವಿಶೇಷ ವಸತಿಯುತ ಶಾಲೆಗಳನ್ನು ತೆರೆಯಲಾಗಿದೆ. ಹಾಗೆಯೇ ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆ ಅಡಿ ಬಾಲ ಕಾರ್ಮಿಕ ವಿಶೇಷ ದಿನ ಶಾಲೆಗಳನ್ನು ತೆರೆಯಲಾಗಿದೆ.

ಉ) ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆಯಡಿಯಲ್ಲಿ ಬೆಂಗಳೂರು ನಗರ ವ್ಯಾಪ್ತಿಯಲ್ಲಿ 38 ಶಾಲೆಗಳು ಕಾರ್ಯ ನಿರತವಾಗಿರುತ್ತದೆ. ಶಾಲೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ರಾಜ್ಯ ಬಾಲ ಕಾರ್ಮಿಕ ಯೋಜನೆ ಅಡಿ 4 ವಿಶೇಷ ವಸತಿ ಶಾಲೆಗಳನ್ನು ಮಂಜೂರು ಮಾಡಲಾಗಿದೆ.

ಅನುಬಂಧ

Annexure

NCLP SCHOOLS		
ಬೆಂಗಳೂರು ನಗರ	1	ಟ್ರಸ್ಟ್‌ಫಾರ್ ರೂರಲ್ ಅಪ್ಲಿಫಟ್‌ಮೆಂಟ್ ಸ್ಪ್ರಾಜೀಯಸ್–[1]. ನಂ.6 ಇ–1, ಶ್ರೀ ಕೃಷ್ಣ ಮಂದಿರ 25ನೇ ಕ್ರಾಸ್, 3ನೇ ಸಿ ಮುಖ್ಯ ರಸ್ತೆ, ಹುಳಿಮಾವು, ಬೆಂಗಳೂರು–76.
	2	ನಂದಾದೀಪ ಅಂಗವಿಕಲರ ಶಿಕ್ಷಣ ಮತ್ತು ಪುನಶ್ಚೇತನ ಸಂಸ್ಥೆ, ಸೊಣ್ಣಪ್ಪನ ಹಳ್ಳಿ, ದೇವನಹಳ್ಳಿ ರಸ್ತೆ, ಯಲಹಂಕ ತಾಲ್ಲೂಕು, ಬೆಂಗಳೂರು.
	3	ಟಿಪ್ಪು ಎಜ್ಯುಕೇಷನಲ್ ಸೊಸೈಟಿ[1] ನಂ.364, ಟಿಪ್ಪು ನಗರ, ಮೈಸೂರು ರಸ್ತೆ, ಚಾಮರಾಜಪೇಟೆ ಬೆಂಗಳೂರು–18
	4	ಟಿಪ್ಪು ಎಜ್ಯುಕೇಷನಲ್ ಸೊಸೈಟಿ[2] ಆನೇಕಲ್ ಬಸ್ ಸ್ಟಾಂಡ್ ಹತ್ತಿರ, ಆನೇಕಲ್
	5	ಅಂಬಿಕ ಮಹಿಳಾ ಸಂಘ[1] 3ನೇ ಕ್ರಾಸ್, ಅಂದ್ರಳ್ಳಿ ರಸ್ತೆ, ಪೀಣ್ಯ 2ನೇ ಘಟ್ಟದ ಹತ್ತಿರ, ಹೆಗ್ಗನಹಳ್ಳಿ, ಬೆಂಗಳೂರು
	6	ಅಂಬಿಕಾ ಮಹಿಳಾ ಸಂಘ [1], ಚೊಕ್ಕಸಂದ್ರ ಮುಖ್ಯ ರಸ್ತೆ, ಟಿ.ದಾಸರಹಳ್ಳಿ, ಬೆಂಗಳೂರು.
	7	ಮೆ: ಕರ್ಡ್ಸ್, ಬನಶಂಕರಿ ದೇವಸ್ಥಾನದ ಹಿಂಬಾಗ, ಸರಬಂಧಿಪಾಳ್ಯ, ಬೆಂಗಳೂರು.
	8	ಪರಸ್ಪರ ಟ್ರಸ್ಟ್, ಮರಿಯಮ್ಮ ದೇವಸ್ಥಾನದ ಹತ್ತಿರ, ಗಂಗೊಡನಹಳ್ಳಿ, ಬೆಂಗಳೂರು.
	9	ಯುವ ಲೋಕ ಪೌಂಡೇಷನ್ [1], ಹೆಣ್ಣೂರು ಬಂಡೆ ಹೊರಮಾವು ರಸ್ತೆ, ಬೆಂಗಳೂರು
	10	ಯುವ ಲೋಕ ಪೌಂಡೇಷನ್[2], ಹೆಣ್ಣೂರು ಬಂಡೆ ಹೊರಮಾವು ರಸ್ತೆ, ಬೆಂಗಳೂರು
	11	ಯುವ ಲೋಕ ಪೌಂಡೇಷನ್[1] ಹೆಣ್ಣೂರು

		ಬಂಡೆ ಹೊರಮಾವು ರಸ್ತೆ, ಬೆಂಗಳೂರು
	12	ರಾಜಾ ಎಜ್ಯುಕೇಷನ್ & ಸೋಷಿಯಲ್ ವೆಲ್‌ಫೇರ್ ಸೊಸೈಟಿ, ನಂ.19,/25, 4ನೇ ಮುಖ್ಯ ರಸ್ತೆ, ಬಿಸ್ಮಿಲ್ಲಾನಗರ, ಬೆಂಗಳೂರು
	13	IPDP [I], ಜೈ ಭುವನೇಶ್ವರಿ ನಗರ, ನಂದಿನಿ ಲೇ ಔಟ್, ಬೆಂಗಳೂರು–29.
	14	IPDP [II], ಉಳ್ಳಾಲ–ಉಪ ನಗರ, ಮಾರಮ್ಮ ದೇವಸ್ಥಾನದ ಎದುರು, ಬೆಂಗಳೂರು–59.
	15	ಅನನ್ಯ ಟ್ರಸ್ಟ್, ಚೋರ್ ಮೇಳಾರಾಮ್ ಹೈಸ್ಕೂಲ್, ಸರ್ಜಾಪುರ ರಸ್ತೆ, ಬೆಳ್ಳಂದೂರು ಬೆಂಗಳೂರು.
	16	ಶ್ರೀ ವಿಕ್ತ ಚಾರಿಟಬಲ್ ಟ್ರಸ್ಟ್, ವಿಕಭವನ, ಹೆಗ್ಗನಹಳ್ಳಿ, ಮಸೀದಿ ಹತ್ತಿರ, ವಿಶ್ವ ನೀಡಂ [ಪಿ] ಬೆಂಗಳೂರು.
	17	ತೇಜಸ್ವಿನಿ ಮಹಿಳಾ ಹಾಗೂ ಮಕ್ಕಳ ಸೇವಾ ಸಮಿತಿ, ಮುತ್ಯಾಲನಗರ ರಸ್ತೆ, ನಿಯರ್ ರೈಲ್ವೆ ಕ್ರಾಸ್, ಮತ್ತಿಕರೆ, ಬೆಂಗಳೂರು–22
	18	ರಾಜಾ ಎಜ್ಯುಕೇಷನ್ & ಸೋಸಿಯಲ್ ವೆಲ್‌ಫೇರ್ ಸೊಸೈಟಿ–2, ಮಂಗಮ್ಮನ ಪಾಳ್ಯ, ಬೆಂಗಳೂರು.
	19	IPDP [III], ಲಗ್ಗೇರಿ ಹತ್ತಿರ, ರಾಜಗೋಪಾಲ್ ನಗರ, ಬೆಂಗಳೂರು
	20	ಒಡನಾಟ ಸೇವಾ ಸಂಸ್ಥೆ, ವೀರಭದ್ರ ನಗರ, ಕೊಳಚೆ ಪ್ರದೇಶ, ರಿಂಗ್ ರಸ್ತೆ ಹತ್ತಿರ, ಬೆಂಗಳೂರು.
	21	ಗಿಲ್‌ಗಾಲ್ ಚಾರಿಟೆಬಲ್ ಟ್ರಸ್ಟ್–1, 4ನೇ ಕ್ರಾಸ್, 3ನೇ ಎ ಕಾಲೋನಿರಸ್ತೆ, ಹೆಚ್ ಎಎಲ್ ಚರ್ಚ್ ರಸ್ತೆ, ದೊಡ್ಡಣ್ಣನಗರ, ಡಿ.ಜಿ.ಹಳ್ಳಿ ರಸ್ತೆ, ಬೆಂಗಳೂರು.

	22	ಸುಂದರ್ ಟ್ರಸ್ಟ್, ಬೊಮ್ಮನಹಳ್ಳಿ, ಬಂಡೆಪಾಳ್ಯ, ಬೆಂಗಳೂರು.
	23	ಸತ್ಯಂ ಶಿವಂ ಸುಂದರಂ ಸಮುದಾಯ ಭವನ, ಜಕ್ಕೂರು ಯಲಹಂಕ ಬೆಂಗಳೂರು
	24	ಗಾಂಧೀಜಿ ಎಜುಕೇಷನ್ ಟ್ರಸ್ಟ್, ಮುನಿವೀರಪ್ಪ ಕಾಲೋನಿ, ಕೆಎಸ್ಆರ್‌ಟಿಸಿ ಬಸ್ ನಿಲ್ದಾಣ ಹತ್ತಿರ, ಆನೇಕಲ್,ಬೆಂಗಳೂರು
	25	ಯಶಸ್ವಿನಿ ಮಹಿಳಾ ಮಂಡಳಿಗಳ ಒಕ್ಕೂಟ, ರೈಲ್ವೆ ಟ್ರಾಕ್ ಹತ್ತಿರ ಆನೇಕಲ್ ರಸ್ತೆ, ಚಂದಾಪುರ, ಬೆಂಗಳೂರು
	26	ಪರಸ್ಪರ ಟ್ರಸ್ಟ್–2, ಆರ್‌ಎಂಸಿ ರಸ್ತೆ, ಯಶವಂತಪುರ, ಬೆಂಗಳೂರು
	27	ದೇವಿಕಾ ವುಮೆನ್ಸ್ & ಚಿಲ್ಡ್ರನ್ಸ್ ಫೌಂಡೇಷನ್, ನಂ.823, 2ನೇ ಎ ಮುಖ್ಯ ರಸ್ತೆ, ಎಸ್ಆರ್ಎಸ್. ಪೀಣ್ಯ, ಬೆಂಗಳೂರು.
	28	ಇಸಿಹೆಚ್ ಒ ಸುಮನಹಳ್ಳಿ, ಮಾಗಡಿ ರಸ್ತೆ, ವಿಶ್ವನೀಡಂ [ಪಿ] ಬೆಂಗಳೂರು –91
	29	ಜೀವನ್ ಪಬ್ಲಿಕ್ ಟ್ರಸ್ಟ್, ಂ. 82, 2ನೇ ಸಿ ಮುಖ್ಯ ರಸ್ತೆ, ವಿನಾಯಕ ನಗರ, ಅಡುಗೆ ಮಾಡಿ ಕೊಳಚೆ ಪ್ರದೇಶ, ಬೆಂಗಳೂರು–30
	30	ಅಂಬಿಕಾ ಮಹಿಳಾ ಸಂಘ–2, ನಂ. 24, ದೊಡ್ಡಬಿದರಕಲ್ಲು, ರಾಜೀವ್ ಗಾಂಧಿ ನಗರ, ನಾಗಸಂದ್ರ [ಪಿ] ಬೆಂಗಳೂರು
	31	ವಿದ್ಯಾನಿಕೇತನ, ಅವಲಹಳ್ಳಿ, ಅಂಜನಾಪುರ [ಪಿ] ಬೆಂಗಳೂರು
	32	ಮುಸ್ಲಿಂ ಕೇರ್ ಫೌಂಡೇಷನ್, ನಂ.150, ವಿದ್ಯಾಸಾಗರ ಲೇಔಟ್, ಥಣಿಸಂದ್ರ, ಬೆಂಗಳೂರು.

	33	ಅಪ್ಪಾನಮ್ಮನೆ, ಭಾರತ ಮಾತಾ ಕ್ವಾಟ್ರಸ್, ಕೆ ಇ ಬಿ, ಮುಖ್ಯ ರಸ್ತೆ, ಪಿಳ್ಳಣ್ಣನ ಗಾರ್ಡನ್, ಬೆಂಗಳೂರು
	34	ಬದುಕು, ಹರಿನಗರ, ಕೊತ್ತೂರು ಮುಖ್ಯರಸ್ತೆ, ಜೆ.ಪಿ.ನಗರ 2ನೇ ಹಂತ ಬೆಂಗಳೂರು
	35	ಹರಿಹರಸುತ ಕಲಾ ಮಂಡಳಿ, ಕೊಳಚೆ ನಿರ್ಮೂಲನಾ ಪ್ರದೇಶ, ಲಕ್ಷ್ಮೀದೇವಿನಗರ, ಲಗ್ಗೆರೆ, ಪೀಣ್ಯ, ಬೆಂಗಳೂರು
	36	ಗಿಲ್‌ಗಾಲ್ ಟ್ರಸ್ಟ್-2, ಕುವೆಂಪುನಗರ, ಜಾಲಹಳ್ಳಿ, ಅಂಗನವಾಡಿ ಕೇಮಧ್ರದ ಹತ್ತಿರ ಬೆಂಗಳೂರು
	37	ಆಶಾಕಿರಣ ಯುವತಿ ಮಂಡಳಿ ಪ್ರೈಮರಿ ಸ್ಕೂಲ್ ಹತ್ತಿರ ಮಾದಪಟ್ಟಣ, ಆನೇಕಲ್ ತಾಲ್ಲೂಕು, ಬೆಂಗಳೂರು
	38	ಟ್ರಸ್ಟ್‌ಫಾರ್ ರೂರಲ್ ಅಪ್ಲಿಫಟ್‌ಮೆಂಟ್ ಸ್ಟಡೀಸ್ ಟ್ರಸ್ಟ್-2, ಅರಕೆರೆ, ಬೆಂಗಳೂರು.

ಬೆಂಗಳೂರು ನಗರದಲ್ಲಿರುವ ಸರ್ಕಾರಿ / ಖಾಸಗಿ ಆಸ್ಪತ್ರೆಗಳು

902 (970) ಶ್ರೀ ನರೇಂದ್ರ ಬಾಬು ಸಿ.ಎ. (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಸರ್ಕಾರಿ/ ಖಾಸಗಿ ಆಸ್ಪತ್ರೆಗಳೆಷ್ಟು (ವಿವರವಾದ ಮಾಹಿತಿ ನೀಡುವುದು);

ಆ) ಸರ್ಕಾರಿ ಆಸ್ಪತ್ರೆಗಳಲ್ಲಿ ಅತ್ಯಾಧುನಿಕ ಉಪಕರಣಗಳು, ಶಸ್ತ್ರಚಿಕಿತ್ಸೆ ಘಟಕಗಳು ಪೂರೈಸಲಾಗಿದೆಯೇ;

ಇ) ಹಾಗಿದ್ದಲ್ಲಿ ಯಾವ ಯಾವ ಉಪಕರಣಗಳು ಆಸ್ಪತ್ರೆಯಲ್ಲಿ ಅಳವಡಿಸಿದೆ. ಅವುಗಳಿಗೆ ಸರ್ಕಾರ ಖರ್ಚು ಮಾಡಿರುವ ಹಣವೆಷ್ಟು (ವಿವರ ನೀಡುವುದು);